A.—Sri A. G. RAMACHANDRA RAO (Minister for Law and Education).—

(a) During 1941-42.

(*b*)—

Year	*Expenditure on literacy.*	*Number made literate.*
	Rs.	
1941-42 ..	3,669	2,253
1942-43 ..	11,225	6,201
1943-44	41,240	7,076
1944-45 ..	59,415	13,638
1945-46 ..	2,08,948	50,817
1946-47 ..	1,92,489	44,265
1947-48 ..	1,68,269	34,327
1948-49 ..	1,87,339	34,022
1949-50 ..	1,39,906	34,175
1950-51 ..	1,49,854	35,931
1951-52 ..	1,21,442	30,399

ಶ್ರೀ ಎಚ್. ಟಿ. ಪುಟ್ಟಪ್ಪ.—ವಯಸ್ಕರ ವಿದ್ಯಾಶಾಲೆಗಳಿಗೆ ಬೇರೆ ಕಡೆ ವಿದ್ಯಾಭ್ಯಾಸ ಮಾಡುವವರನ್ನೂ ಸೇರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದರಲ್ಲಿ ಅನ್ಯಾಯವೇನೂ ಕಾಣುವುದಿಲ್ಲ. ಅದರೂ ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಎಚ್. ಟಿ. ಪುಟ್ಟಪ್ಪ.—ತಮ್ಮ ಗಮನಕ್ಕೆ ಬಂದರೆ ಏನುಮಾಡುತ್ತೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರ ಮಾಡುತ್ತೇವೆ.

ಶ್ರೀ ಬಿ. ರಾಚಯ್ಯ.—ವಯಸ್ಕರ ಶಿಕ್ಷಣ ಸಮಿತಿಯನ್ನು ವಿದ್ಯಾ ಇಲಾಖೆಯ ಡೈರೆಕ್ಟರ ಹತೋಟಿಗೆ ಕೊಟ್ಟಿದ್ದಾರೆಯೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದರಲ್ಲಿ ಬೇರೆ ಬೇರೆ ಅನೇಕ ಭಾಗಗಳಿವೆ. ಅವುಗಳಲ್ಲಿ ಕೆಲವನ್ನು ಡೈರೆಕ್ಟರಿಗೆ ವಹಿಸಬೇಕೆಂದು ವಿದ್ಯಾನುಧಾರಣಾ ಸಮಿತಿಯವರು ಶಿಫಾರಸು ಮಾಡಿದ್ದಾರೆ, ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ. ರಾಚಯ್ಯ.—ಅಲ್ಲಿ ಸಂಬಳ ಕಡಿಮೆಯೆಂದು ಕಾಣುತ್ತಿರುವುದರಿಂದ ಹೀಗೆ ಮಾಡಬೇಕೆಂದು ಮಾಡಿದ್ದೇಯೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದೂ ಒಂದು ಅಭಿಪ್ರಾಯವಿದೆ.

Sri S. SRINIVASA IYENGAR.—What is the total period of training that the Adult Literacy Committee give to an illiterate?

Sri A. G. RAMACHANDRA RAO.—Five months' course is said to make them literate.

Sri S. SRINIVASA IYENGAR.—Are the Government aware that at the end of that period, after that, there is no procedure or system to make the new literate to be permanently literate?

Sri A. G. RAMACHANDRA RAO.—Suitable literature is being evolved for them to follow after their learning period is over.

Sri S. SRINIVASA IYENGAR.—Is it not a fact that this literature does not exist in all places wherein these literary classes are conducted?

Sri A. G. RAMACHANDRA RAO.—Government are aware.

Sri S. SRINIVASA IYENGAR.—Will it not be much better if this is made available through Primary Education and thereby given greater facilities to the boys?

Sri A. G. RAMACHANDRA RAO.—Yes. This may be further discussed when we take up the subject of Educational Reforms.

ಶ್ರೀ. ಟಿ. ಸಿ. ಬಸಪ್ಪ.—ಇಲ್ಲಿ ನಮೂದು ಮಾಡಿರುವ ಹಣದಲ್ಲಿ ಸಂಬಳಕ್ಕೆ ಎಷ್ಟು ಖರ್ಚಾಗಿದೆ?

Sri A. G. RAMACHANDRA RAO.—Most of it as salary for the staff. I cannot definitely give the figure.

ಶ್ರೀ ಟಿ. ಸಿ. ಬಸಪ್ಪ.—ಲಿಟರತಕ್ಕ ಆರ್ಗನೈಜರು ವ.ತ್ತು ಸೂಪರ್‌ವೈಜರುಗಳಿಗೆ ಸಂಬಳಕ್ಕಾಗಿ ಎಷ್ಟು ಹೋಗುತ್ತದೆ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರಿಸಿ ಹೇಳುತ್ತೇನೆ.

ಶ್ರೀ ಟಿ. ಸಿ. ಬಸಪ್ಪ.—ವರದಿ ಕಳುಹಿಸುತ್ತಾರೆಯೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಬರುತ್ತಿದೆ.

ಶ್ರೀ ಟಿ. ಸಿ. ಬಸಪ್ಪ.—ಅದರಲ್ಲಿ ಬೇರೆ ಬೇರೆಯಾಗಿ ನಮೂದು ಮಾಡುತ್ತಾರೆಯೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡುತ್ತಾರೆ.

ಶ್ರೀ ಟಿ. ಸಿ. ಬಸಪ್ಪ.—ಅದನ್ನು ತಿಳಿಸುವುದಕ್ಕೆ ಸಾಧ್ಯವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಧ್ಯ, ತಿಳಿಸುತ್ತೇನೆ.

Drinking Water facilities to some Villages in Bangalore North Taluk.

Q.—420. Sri R. MUNISWAMIAH (Bangalore North—Scheduled Castes).—

Will the Government be pleased to state:—

The arrangements made to supply drinking water to the villages of Sunkadakatte, Banavara, Soldevanahalli and Peenya in the Bangalore North Taluk?

A.—Sri T. CHANNIAH (Minister for Public Health and Local Self-Government).—

Wells have been provided wherever possible in these villages. But some wells, though deep, go dry for four months during summer. Proposals are made for the supply of water to Sunkadakatte, Soldevanahalli and Peenya from the pipe lines running from Thippagondanahalli and Hessarghatta to Bangalore. Estimates have been prepared and the matter is under consideration.

ಶ್ರೀ ಆರ್. ಮುನಿಸ್ವಾಮಯ್ಯ.—ಯಾವ ಯಾವ ಅಂದಾಜು ಎಷ್ಟೆಷ್ಟಕ್ಕೆ ತಯಾರಾಗಿದೆ?

ಶ್ರೀ ಟಿ. ಚನ್ನಯ್ಯ.—ಸುಂಕದಕಟ್ಟೆ ಗ್ರಾಮಕ್ಕೆ ನೀರು ನರಬರಾಯಿಗೆ 25,370 ರೂಪಾಯಿಗೆ ಒಂದು ಅಂದಾಜು ತಯಾರಾಗಿದೆ; ಅದನ್ನು ಪರಿಶೀಲನೆ ಬಗ್ಗೆ ಪಬ್ಲಿಕ್‌ವರ್ಕ್ಸ್ ಇಲಾಖೆಗೆ ಕಳುಹಿಸಿದೆ, ಅವರು ಅಂದಾಜನ್ನು ವಾಪಸು ಕಳುಹಿಸಿಲ್ಲ. ಸೋಲದೇವನ ಹಳ್ಳಿಗೆ 6,580 ರೂಪಾಯಿಗೆ ಅಂದಾಜು ತಯಾರು ಮಾಡಿದ್ದಾರೆ, ವಿಲೇಜ್ ಪಂಚಾಯಿತಿಯವರು 6,300 ರೂಪಾಯಿ ಕೊಡಬೇಕೆಂದು ತಿಳಿಸಲಾಗಿದೆ; ಅವರಿನ್ನು ಹಣ ಜಮಾಮಾಡುವ ಬಗ್ಗೆ ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ. ಅವರು ಹಣ ಕೊಟ್ಟನಂತರ ಕೆಲಸವನ್ನು ತೆಗೆದುಕೊಳ್ಳಲಾಗುವುದು. ಪೀಣ್ಯ ಗ್ರಾಮದಲ್ಲಿ 14,000 ರೂಪಾಯಿ ಖರ್ಚಿನಲ್ಲಿ ಒಂದು ರಿಜರ್ವಾಯರ್ ಕಟ್ಟಲು ಅಂದಾಜಾಗಿದೆ. ಆದರೆ ಇನ್ನೂ ಕಡಮೆ ಖರ್ಚಿನಲ್ಲಿ, ಅಂದರೆ 4,900 ರೂಪಾಯಿನಲ್ಲಿ ಒಂದು ಅಂದಾಜು ತಯಾರುಮಾಡಿ ಕಳುಹಿಸಬೇಕೆಂದು ತಿಳಿಸಲಾಗಿದೆ. ಅಂದಾಜು ಬಂದನಂತರ ಕೆಲಸವನ್ನು ತೆಗೆದು ಕೊಳ್ಳುತ್ತೇವೆ.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಕೆಲಸಗಳನ್ನು ಪೂರ್ತಿ ಮುಗಿಸಬೇಕಾದರೆ ಇನ್ನು ಎಷ್ಟು ಬೇಸಿಗೆಗಳು ಕಳೆಯಬೇಕು?

ಶ್ರೀ ಟಿ. ಚನ್ನಯ್ಯ.—ಸಾಧ್ಯವಾದಷ್ಟು ಬೇಗ ಮಾಡುತ್ತೇವೆ.

ಶ್ರೀ ಆರ್. ಮುನಿಸ್ವಾಮಯ್ಯ.—ಮೂರು ನಾಲ್ಕು ಬೇಸಿಗೆಗಳು ಕಳೆಯಬಹುದೆ?

(ಉತ್ತರವಿಲ್ಲ)

ಶ್ರೀ ಕೆ. ಎ. ಬೈರೇಗೌಡ.—ಸರ್ಕಾರದವರು ಎಲ್ಲಾ ಕಡೆಗೂ ಕುಡಿಯುವ ನೀರನ್ನೊದಗಿಸುವುದು ಕರ್ತವ್ಯವಲ್ಲವೆ?

Mr. SPEAKER.—It is understood. Any other supplementary?

ಶ್ರೀ ಕೆ. ಎ. ಬೈರೇಗೌಡ.—ಸುಂಕದಕಟ್ಟೆ ತಿಪ್ಪಗೊಂಡನ ಹಳ್ಳಿಯ ಪಕ್ಕದಲ್ಲಲ್ಲವೆ?

ಶ್ರೀ ಟಿ. ಚನ್ನಯ್ಯ.—ಹೌದು, ಇದೆ. ಒಂದು 'ಟ್ಯಾಪ್ ಕನೆಕ್ಷನ್' ಮಾಡಬೇಕೆಂದು ಕೇಳಿದ್ದಾರೆ, ಅದನ್ನು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಕೆ. ಎ. ಬೈರೇಗೌಡ.—ಅದನ್ನು ಮಾಡುವುದಕ್ಕೆ ಇಷ್ಟೊಂದು ಮೊಬಲಗಾಗುತ್ತದೆಯೆ?

ಶ್ರೀ ಟಿ. ಚನ್ನಯ್ಯ.—ಅದಕ್ಕೇ, ಜಾಸ್ತಿಯಾಗಿರುವುದನ್ನು ಕಡಮೆ ಮಾಡಬೇಕೆಂದು ಬೇರೆ ಅಂದಾಜು ಕೇಳಿದ್ದೇವೆ.

ಶ್ರೀ ಕೆ. ಎ. ಬೈರೇಗೌಡ.—ಸುಂಕದ ಕಟ್ಟೆಯ ಪತ್ತಿರ ಪಕ್ಕದಲ್ಲಿ ವೈರ್‌ಮೆನ್‌ಗಳಿರುವ ಕಡೆ ಒಂದು ಟ್ಯಾಪ್ ಹಾಕಿಲ್ಲವೆ?

ಶ್ರೀ ಟಿ. ಚನ್ನಯ್ಯ.—ಈಗ ಒಂದು ನಲ್ಲಿಯಿಂದ ನೀರನ್ನು ತೆಗೆದುಕೊಂಡು ಬಂದು ಉಪಯೋಗಿಸುತ್ತಿದ್ದಾರೆ. ಅಲ್ಲಿಗೇ 'ಟ್ಯಾಪ್ ಕನೆಕ್ಷನ್' ಮಾಡುವುದಕ್ಕೆ ಅಂದಾಜನ್ನು ವಾಪಸು ಕಳುಹಿಸಿ ಕಡಮೆ ಮೊಬಲಗಿಗೆ ಅಂದಾಜು ಮಾಡಬೇಕೆಂದು ಹೇಳಿದ್ದೇವೆ. ಅದು ಒಂದು ಮೇರೆ ಮಾಡುತ್ತೇವೆ.

Constructing a Maternity Hospital at Magadi.

Q.—614. Sri S. SIDDAPPA (Magadi).—

Will the Government be pleased to state:—

(*a*) whether it is fact that a sum of Rs. 20,000 has been collected from the public of Magadi Taluk for constructing a maternity hospital at Magadi Town and has been deposited with the Government;

(*b*) whether the foundation-stone of the said maternity hospital has not been laid by His Highness the Maharaja;

(*c*) whether the estimate for the same has not been sanctioned;

(*d*) the reasons for not taking up the construction of the building?

A.—Sri T. CHANNIAH (Minister for Public Health and Local Self-Government).—

(*a*) No.

(*b*) Yes. It has been laid by His Highness.

(*c*) Revised estimate is not yet sanctioned.

(*d*) The question is under correspondence.

ಶ್ರೀ ಎಸ್. ಸಿದ್ದಪ್ಪ.—ಮಾಗಡಿಯಲ್ಲಿ ಒಂದು ಹೆರಿಗೆ ಆಸ್ಪತ್ರೆ ಕಟ್ಟಲು 20 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆಯೆ ಎಂದು ಕೇಳಿರುವುದಕ್ಕೆ ಇಲ್ಲವೆಂದು ಹೇಳಿದ್ದೀರಿ, ಹಣವನ್ನೇ ಕಟ್ಟಲ್ಲವೆ?

ಶ್ರೀ ಟಿ. ಚನ್ನಯ್ಯ.—ಹಣ ಜಮಾಮಾಡಿಲ್ಲ. ಮುನಿಸಿಪಾಲಿಟಿಯವರು ಮಾತ್ರ ಒಂದು ಕಂಬ್ಯೈಂಡ್ ಆಸ್ಪತ್ರೆ ಕಟ್ಟಲು 29 ಸಾವಿರ ರೂಪಾಯಿಗೆ ಅಂದಾಜಾಗಿರುವುದರಲ್ಲಿ ಅರ್ಧಭಾಗ ಕೊಡಲು ಒಪ್ಪಿದ್ದಾರೆ. ಪಬ್ಲಿಕ್ ಡೊನೇಷನ್ ಬಂದಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಮುನಿಸಿಪಾಲಿಟಿಯವರ ಹೆಸರಿನಲ್ಲಿ ಸಾರ್ವಜನಿಕರಿಂದ ವಸೂಲಾದ ಹಣದಿಂದ ಕಟ್ಟಿದ್ದಾರೆಂಬುದನ್ನು ಇಲ್ಲವೆಂದು ಹೇಳುತ್ತೀರಾ?

ಅಧ್ಯಕ್ಷರು.—ಸಾರ್ವಜನಿಕರಿಂದ ಬಂದಿಲ್ಲವೆಂದು ಉತ್ತರ ಹೇಳಿದ್ದಾರೆ.